ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ: ಸಿ5(5) ಕಾ.ನಿ.ವ-01/2020-21 ದಿನಾಂಕ: 31-03-2021

**ಸುತ್ತೋಲೆ**

ವಿಷಯ: ಕಾರ್ಯ ನಿರ್ವಹಣಾ ವರದಿಗಳನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸುವ ಬಗ್ಗೆ.

&&&

ಕರ್ನಾಟಕ ನಾಗರೀಕ ಸೇವಾ (ಕಾರ್ಯನಿರ್ವಹಣಾ ವರದಿಗಳು) ತಿದ್ದುಪಡಿ ನಿಯಮಗಳು 2004 ರ ಪ್ರಕಾರ ಎಲ್ಲಾ ಸರ್ಕಾರಿ ನೌಕರರು ಪ್ರತಿ ವರ್ಷ ಮಾರ್ಚ್ 31 ರಲ್ಲಿದ್ದಂತೆ ತಮ್ಮ ಮೇಲಾಧಿಕಾರಿಗಳ ಮುಖಾಂತರ ಕಾರ್ಯ ನಿರ್ವಹಣಾ ವರದಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಅದರನ್ವಯ, ರಾಜ್ಯಮಟ್ಟದ ಕಛೇರಿಗಳ/ವಿಭಾಗ/ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪತ್ರಾಂಕಿತ ಸಹಾಯಕರ, ಪತ್ರಾಂಕಿತ ವ್ಯವಸ್ಥಾಪಕರ, ಸಹಾಯಕ ನಿರ್ದೇಶಕರು (ವಾಣಿಜ್ಯ), ಲೆಕ್ಕಾಧೀಕ್ಷಕರ ಹಾಗೂ ಅಧೀಕ್ಷಕರ ಬೋಧಕೇತರ ಸಿಬ್ಬಂದಿಗಳು2020-21ನೇ ಸಾಲಿನ ಕಾರ್ಯ ನಿರ್ವಹಣಾ ವರದಿಗಳನ್ನು ವರದಿ ಮಾಡುವ ಪ್ರಾಧಿಕಾರಿಗಳು, ಪುನರ್ ಅವಲೋಕನ ಪ್ರಾಧಿಕಾರಿಗಳ ಹಾಗೂ ಅಂಗೀಕಾರ ಪ್ರಾಧಿಕಾರಿಗಳ ಷರಾ ನಮೂದಿಸಿ, ಸಹಿ ಮಾಡಿಸಿ ಪ್ರತಿಯೊಂದು ಅಧಿಕಾರಿ ಹಾಗೂ ಸಿಬ್ಬಂದಿಗಳವಾರು ಪ್ರತ್ಯೇಕ ಡೋಸಿಯರ್ಸ್‌ಗಳಲ್ಲಿ ಮಾಹಿತಿಗಳನ್ನು ಭರ್ತಿ ಮಾಡಿ ಒಂದು ತಿಂಗಳ ಒಳಗಾಗಿ ಈ ಕಛೇರಿಯ ಕಛೇರಿ ಸಿಬ್ಬಂದಿ ಶಾಖೆಗೆ ಮುದ್ದಾಂ ಸಲ್ಲಿಸಲು ತಿಳಿಸಿದೆ.

ಪ್ರಥಮ ದರ್ಜೆ ಸಹಾಯಕರು/ಶೀಘ್ರಲಿಪಿಗಾರರ ಹಾಗೂ ಸದರಿ ಹುದ್ದೆಗಿಂತ ಕೆಳಗಿನ ಹುದ್ದೆಗಳಿಗೆ ಸಂಬಂಧಿಸಿದಂತೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು/ವಿಭಾಗ ಮಟ್ಟದಲ್ಲಿ ಸಹ ನಿರ್ದೇಶಕರು/ರಾಜ್ಯ ಕಛೇರಿಗಳಲ್ಲಿ ನಿರ್ದೇಶಕರುಗಳು ಕಾರ್ಯ ನಿರ್ವಹಣಾ ವರದಿಗಳನ್ನು ಸಿದ್ಧಪಡಿಸಿ ಅವರ ಹಂತದಲ್ಲಿ ಸಿಬ್ಬಂದಿವಾರು ಪ್ರತ್ಯೇಕ ಕಡತದಲ್ಲಿ ಸಂರಕ್ಷಿಸಿಡುವುದು ಹಾಗೂ ಈ ಕಛೇರಿಯ ಬೋಧಕೇತರ ಸಿಬ್ಬಂದಿಗಳ ವರದಿ ಮಾಡುವ ಪ್ರಾಧಿಕಾರಿಗಳು, ಪುನರ್ ಅವಲೋಕನ ಪ್ರಾಧಿಕಾರಿಗಳ ಹಾಗೂ ಅಂಗೀಕಾರ ಪ್ರಾಧಿಕಾರಿಗಳ ಷರಾ ನಮೂದಿಸಿ ಸಹಿ ಮಾಡಿಸಿ ಒದು ತಿಂಗಳ ಒಳಗಾಗಿ ಕಛೇರಿ ಸಿಬ್ಬಂದಿ ಶಾಖೆಗೆ ಸಲ್ಲಿಸುವಂತೆ ತಿಳಿಸಿದೆ.

**ಡಾ॥ ರೂಪಶ್ರೀ.ಎಸ್, ಕೆ.ಎ.ಎಸ್**
**ಜಂಟಿ ನಿರ್ದೇಶಕರು [ಆಡಳಿತ]**

**ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ :**

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಕಛೇರಿ, , ಬೆಂಗಳೂರು.
2. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಬೆಂಗಳೂರು
3. ನಿರ್ದೇಶಕರು[ಪರೀಕ್ಷೆಗಳು] ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು.
4. ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ, ಬೆಂಗಳೂರು
6. ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮೈಸೂರು ವಿಭಾಗ, ಮೈಸೂರು.
7. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಸಿ.ಟಿಇ.
8. ಪ್ರಾಂಶುಪಾಲರಿಗೆ.ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಜಿಲ್ಲಾ ಉಪ ನಿರ್ದೇಶಕರು (ಆಡಳಿತ)
9. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಡಯಟ್ ಉಪ ನಿರ್ದೇಶಕರು (ಅಭಿವೃದ್ಧಿ)
10. ಉಪ ನಿರ್ದೇಶಕರು, ಶಿಕ್ಷಕರ ಕಲ್ಯಾಣ ನಿಧಿ ಕಛೇರಿ, ಬೆಂಗಳೂರು.
11. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ [ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ರವರ ಮುಖೇನ]
12.ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ.
13.ಈ ಕಛೇರಿಯ ನಿರ್ದೇಶಕರು/ ಸಹ ನಿರ್ದೇಶಕರ ಆಪ್ತ ಸಹಾಯಕರಿಗೆ.
14. ಈ ಕಛೇರಿಯ ಎಲ್ಲಾ ಅಧಿಕಾರಿಗಳು/ಶಾಖಾಧಿಕಾರಿಗಳು/ನೌಕರರಿಗೆ.
15 ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ)
16. ಕಛೇರಿ ಪ್ರತಿ.